ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ



## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಸಿನಿಮಾ ನಟ ನಟಿಯರು ಜಾತ್ಯತೀತರು

ಇದುವರೆಗೂ ಭಾರತೀಯ ಚಿತ್ರರಂಗದಲ್ಲಿ ನಟ-ನಟಿಯರು ಜಾತಿ, ಭಾಷೆ, ಧರ್ಮ, ಪ್ರಾಂತ ಮೀರಿ ಬೆಳೆದಿದ್ದಾರೆ. ಮಲೆಯಾಳದ ಎಂಜಿಆರ್, ಕನ್ನಡದ ರಜನೀ ತಮಿಳು ಚಿತ್ರರಂಗದಲ್ಲಿ ಮಿಂಚಿದರು. ಅಮೀರ್ ಖಾನ್, ಶಾರೂಕ್ ಖಾನ್ ಭಾರತೀಯರ ಅಚ್ಚುಮೆಚ್ಚಿನ ನಟರಾದರು. ತೆಲುಗಿನ ಬಿ ಆರ್ ಪಂತಲು ಕನ್ನಡ ಚಿತ್ರರಂಗದ ಆಧಾರ ಸ್ತಂಭಗಳಲ್ಲಿ ಒಬ್ಬರಾದರು. ರಾಜಕುಮಾರ್, ವಿಷ್ಣುವರ್ಧನ, ಅಂಬರೀಶರ ಕುಲ ಯಾವುದೆಂದು ಇಂದಿನವರೆಗೂ ತಿಳಿದಿರಲಿಲ್ಲ. ತಮ್ಮ ಜಾತಿಯ ನಟ ನಟಿಸಿದ್ದಾನೆ, ತಮ್ಮ ಜಾತಿಯ ನಟಿ ನಾಯಕಿಯಾಗಿದ್ದಾಳೆಂದು ಚಿತ್ರ ಪ್ರೇಮಿಗಳು ಎಂದೂ ಸಿನಿಮಾ ನೋಡಿಲ್ಲ. ಇದೊಂದು ಅಪೂರ್ವ ಜಾತ್ಯತೀತ ರಂಗ.

ಆದರೆ ಇದಕ್ಕೆ ತದ್ವಿರುದ್ದವಾಗಿ, ಅಂಬಿ ಮತ್ತು ವಿಷ್ಣು ಸ್ಮಾರಕ ನಿರ್ಮಾಣ ವಿಷಯದಲ್ಲಿ ರಾಜಕೀಯ ಪ್ರವೇಶವಾಗಿ, ಈಗ ಇಲ್ಲಿಯೂ ಜಾತಿ ವಿಜೃಂಭಿಸುತ್ತಿರುವುದು ಖೇದಕರ ಬೆಳವಣಿಗೆ. ಒಂಬತ್ತು ವರ್ಷದ ಹಿಂದೆ ನಿಧನರಾದ, ಕನ್ನಡ ಚಿತ್ರರಂಗದ ಅತ್ಯುತ್ತಮ ನಟ ವಿಷ್ಣುವರ್ಧನರ ಸ್ಮಾರಕ ನಿರ್ಮಾಣ ವಿವಾದ ಸ್ವರೂಪ ಪಡೆದು ಇದುವರೆಗೂ ಸ್ಮಾರಕ ನಿರ್ಮಾಣ ಆಗಲೇ ಇಲ್ಲ. ಆದರೆ ವಿಷ್ಣು ಸ್ಮಾರಕ ವಿಷಯದಲ್ಲಿ ನಿರ್ಲಕ್ಷ್ಯ ಮಾಡುತ್ತಾ ಬಂದ ಸರಕಾರ, ಇತ್ತೀಚೆಗೆ ನಿಧನರಾದ ನಟ ಅಂಬರೀಶ ವಿಷಯದಲ್ಲಿ ಮಾತ್ರ ಅತ್ಯಂತ ಚುರುಕಾಗಿ, 'ಇದು ಪಕ್ಕಾ ಜಾತಿ ರಾಜಕೀಯ' ಎಂದು ಸುಲಭವಾಗಿ ಗುರುತಿಸುವಂತೆ ವರ್ತಿಸಿದ್ದು ಕನ್ನಡಿಗರ ದೌರ್ಭಾಗ್ಯ. ಕೆಲವು ಕಾಲ ಇದ್ದು ಹೋಗುವ ಸರಕಾರ, ಶಾಶ್ವತವಾಗಿ ವಿಜೃಂಭಿಸುವ ಚಿತ್ರರಂಗಕ್ಕೆ ಇಂತಹ ಜಾತಿ ವ್ಯವಸ್ಥೆ ರೂಪಿಸಿ ಶಾಶ್ವತವಾಗಿ ಕಳಂಕ ಹೊತ್ತುಕೊಳ್ಳುವುದು ತರವಲ್ಲ.

-**ಸತ್ಯ ಬೋಧ** ಹೊಸಕೆರೆಹಳ್ಳಿ ಬಡಾವಣೆ

### ರಸ್ತೆ ರಿಪೇರಿ ಮಾಡಿ

ಸಿಂದಗಿ ತಾಲ್ಲೂಕಿನಿಂದ 13ಕಿಮೀ ದೂರದಲ್ಲಿರುವ ಬೋರಗಿ ಗ್ರಾಮದ ಪ್ರಮುಖ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಬೋರ್‌ವೆಲ್ ಮತ್ತು ಕೈ ಪಂಪುಗಳಿಂದ ನೀರು ರಸ್ತೆಯ ಮೇಲೆಲ್ಲ ಹರಿದು ಬರುತ್ತಿದೆ. ಇದರಿಂದ ರಸ್ತೆಯೆಲ್ಲ ಕೊಳಚೆಯಾಗಿದ್ದು, ಬೇರೆ ಊರಿನಿಂದ ಬರುವ ವಾಹನ ಸವಾರರಿಗೆ ರಸ್ತೆ ಯಾವುದು, ಚರಂಡಿ ಯಾವುದು ಎಂಬುದು ತಿಳಿಯದಂತಾಗಿದೆ. ಈ ಸಮಸ್ಯೆಯ ಬಗ್ಗೆ ಸ್ಥಳೀಯ ಜನಪ್ರತಿನಿಧಿಗಳು ಮಾತ್ರ ಕ್ಯಾರೆ ಎನ್ನುತ್ತಿಲ್ಲ. ಹದಗೆಟ್ಟಿರುವ ಗ್ರಾಮದ ರಸ್ತೆಗಳನ್ನು ಕಂಡು ಜನರು ಹಿಡಿಶಾಪ ಹಾಕುತಿದ್ದಾರೆ. ಆದ್ದರಿಂದ ಲೋಕೋಪಯೋಗಿ ಇಲಾಖೆ ಹಾಗೂ ಸಂಬಂಧಿಸಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸೇರಿಕೊಂಡು ಗ್ರಾಮದ ರಸ್ತೆ ಸೇರಿದಂತೆ, ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿ ವಿನಂತಿ.

-**ಸದ್ದಾಮ್ ಕೆ. ಆಲಗೂರ** ಸಿಂದಗಿ

### ಮಾಸಾಶನ ನೀಡಿ

ಮೈತ್ರಿ ಸರಕಾರ ಯಾವ ಮುಹೂರ್ತದಲ್ಲಿ ಅಧಿಕಾರಕ್ಕೆ ಬಂತೋ, ಏನೋ! ಆರು ತಿಂಗಳಾದರೂ ಜನರ ಸಮಸ್ಯೆಗೆ ಈ ಸರಕಾರದಿಂದ ಸರಿಯಾದ ಪರಿಹಾರ ಸಿಗುತ್ತಿಲ್ಲ, ನೆಮ್ಮದಿಯೂ ಇಲ್ಲ. ಪ್ರಣಾಳಿಕೆಯಲ್ಲಿ ಘೋಷಿಸಿದ ಯಾವೊಂದು ಬೇಡಿಕೆ ಈಡೇರಿಸುತ್ತಿಲ್ಲ. ನೂರಾರು ಕಾರಣ, ನೆಪ ಹೇಳುತ್ತಾ ಸಾಲ ಮನ್ನಾವನ್ನು ಮುಂದೂಡುತ್ತಲೇ ಇದ್ದಾರೆ. ಇನ್ನು ಅಂಗವಿಕಲರು, ವಿಧವೆಯರು, ವೃದ್ಧರಿಗೆ ಸರಿಯಾದ ಮಾಸಾಶನ ಬರುತ್ತಿಲ್ಲ. ಇದರಿಂದ ಅಂಗವಿಕಲರು, ಹಿರಿಯ ನಾಗರೀಕರು ಬೇರೆಯವರಿಂದ ಬೇಡಿ ತಿನ್ನುವಂತಾಗಿದೆ. ಆದ್ದರಿಂದ ರಾಜ್ಯ ಸರಕಾರ ಹಾಗೂ ಸಂಬಂಧಪಟ್ಟ ಇಲಾಖೆ ಪ್ರತಿ ತಿಂಗಳು ಮಾಸಾಶನ ಬರುವಂತೆ ಕ್ರಮ ಕೈಗೊಂಡರೆ ಅಂಗವಿಕಲರು, ಹಿರಿಯ ನಾಗರಿಕರಿಗೆ ಅನುಕೂಲವಾಗುತ್ತದೆ.

-**ಮಣಿಕಂಠ ಹಿರೇಮಠ** ಬಾಗಲಕೋಟ

### ಶಿಕ್ಷಕರ, ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟ



ಇತ್ತೀಚಿನ ದಿನಗಳ ಜ್ವಲಂತವಾದ ಸಮಸ್ಯೆಯೊಂದಿದೆ. ಅದೇ ಶಿಕ್ಷಕರ ವರ್ಗಾವಣೆ. ಹಲವಾರು ವರ್ಷಗಳಿಂದ ಕಗ್ಗಂಟಾಗಿ ಉಳಿದಿರುವ ಈ ಸಮಸ್ಯೆಯ ಹಿಂದಿನ ಹಲವಾರು ಆಯಾಮಗಳನ್ನು, ಇದಕ್ಕೆ ಪರೋಕ್ಷವಾಗಿ ಅನ್ವಯಿಸಬಹುದಾದ ಕೆಲವು ಉದಾಹರಣೆಗಳನ್ನು ಈ ರೀತಿ ವಿಶ್ಲೇಷಿಸಬಹುದು.

ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ ಪಟುತ್ವ ವ್ಯಕ್ತಿಯ ಜೀವನದಲ್ಲಿ ಇರಬಹುದಾದ ಕೌಟುಂಬಿಕ ಸಮಸ್ಯೆಗಳ ಪ್ರಮಾಣವನ್ನು ಅವಲಂಬಿಸಿ ಬದಲಾಗುವುದು ಸಾರ್ವಕಾಲಿಕ ಸತ್ಯ. ಶಿಕ್ಷಕರು ಇಂದಿನ ಮಕ್ಕಳ ಭವಿಷ್ಯವನ್ನು ಮಾತ್ರವಲ್ಲದೆ ದೇಶದ ಭವಿಷ್ಯದ ರೂವಾರಿಗಳನ್ನು ರೂಪಿಸುವ ಶಿಲ್ಪಿಗಳು. ಅಂತಹ ಶಿಲ್ಪಿಗಳ ಕೈಯಿಂದ ಸುಂದರವಾದ ರಚನೆಗಳು ರೂಪುಗೊಳ್ಳಬೇಕಾದಲ್ಲಿ ಅವರಿಗೆ ಏಕಾಗ್ರತೆಯಿಂದ ಪಾಠ ಪ್ರವಚನ ನಡೆಸಬಹುದಾದ ವಾತಾವರಣವನ್ನು ಒದಗಿಸುವ ಜವಾಬ್ದಾರಿ ನಮ್ಮೆಲ್ಲರದ್ದು, ಮುಖ್ಯವಾಗಿ ಆಡಳಿತ ಚುಕ್ಕಾಣಿ ಹಿಡಿದಿರುವ ಸರಕಾರದ್ದು. ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ಅಲವತ್ತುಗೊಳ್ಳುವ ನಾವು ಶಿಕ್ಷಕರ ಮೂಲಭೂತ ಸಮಸ್ಯೆಗಳ ಬಗ್ಗೆ ಗಮನ ಹರಿಸದೆ ತಪ್ಪು ಮಾಡುತ್ತಿದ್ದೇವೆ ಅನಿಸುವುದಿಲ್ಲವೇ?

ಸಾಮಾನ್ಯವಾಗಿ ಸರಕಾರದ ಎಲ್ಲಾ ಇಲಾಖೆಗಳ ಸಿಬ್ಬಂದಿಯವರ ಕಾರ್ಯ ನಿರ್ವಹಣೆಯನ್ನು ಒಂದು ಕ್ಷಣ ಬಹುರಾಷ್ಟ್ರೀಯ ಕಂಪೆನಿಯ ಕಾರ್ಯ ನಿರ್ವಹಣೆಯೊಂದಿಗೆ ಕ್ಷಣಕಾಲ ತುಲನೆ ಮಾಡುವುದು ಪ್ರಸ್ತುತವೆನಿಸಬಹುದು ಎಂಬುದು ನನ್ನ ಅನಿಸಿಕೆ.

ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡಲು ಹಾತೊರೆಯುವುದರ ಹಿಂದೆ ವೇತನ ಮತ್ತಿತರ ಸೌಲಭ್ಯಗಳ ಆಕರ್ಷಣೆ ಮಾತ್ರ ಕಾರಣವಲ್ಲ, ನೌಕರರ, ಸಿಬ್ಬಂದಿಯವರಿಗೆ ಉದ್ಯೋಗದಲ್ಲಿ ತೀವ್ರ ಒತ್ತಡವಿದ್ದರೂ ಅವರಿಗೆ ವೈಯಕ್ತಿಕ ಬದುಕಿಗೆ ಉತ್ತಮ ವಾತಾವರಣವನ್ನು ಕಲ್ಪಿಸಲು ಕಾರ್ಯಸಾಧ್ಯವಿರುವ ಎಲ್ಲವನ್ನೂ ಸಂಸ್ಥೆ ಒದಗಿಸುತ್ತವೆ. ಅಂದರೆ ಕುಟುಂಬ ಸಹಿತ ಇರಲು ಅಗತ್ಯ ವ್ಯವಸ್ಥೆ ಮಾಡುತ್ತಾರೆ. ವಿದೇಶದಲ್ಲಿ ನಿಯೋಜನೆ ಮಾಡುವ ಸಂದರ್ಭಗಳಲ್ಲಿ ಪತಿ-ಪತ್ನಿ ಇಬ್ಬರಿಗೂ ವಿದೇಶಕ್ಕೆ ಹೋಗಲು ಅಗತ್ಯವಿರುವ ವೀಸಾ, ವಿಮಾನ ಪ್ರಮಾಣ ವೆಚ್ಚ ಕೂಡಾ ಭರಿಸುತ್ತಾರೆ.

ವಿಷಾದನೀಯವೆಂದರೆ ಇಂತಹ ಪ್ರತಿಭೆಗಳನ್ನು ರೂಪಿಸುವ ಶಿಕ್ಷಕರಿಗೆ ಕನಿಷ್ಠ ಪತಿ-ಪತ್ನಿ ಒಂದೆಡೆ ಇರುವಂತೆ, ಅನಾರೋಗ್ಯ ನೆಲೆಯಲ್ಲಿ ವರ್ಗಾವಣೆ ನೀಡಲೂ ಇಷ್ಟು ಗೊಂದಲ ಬೇಕೆ? ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರನ್ನು ಹೊಂದಿದ್ದರೂ ವರ್ಷಾನುಗಟ್ಟಲೆ ವರ್ಗಾವಣೆಯಂತಹ ಚಿಕ್ಕದೊಂದು ಕೆಲಸಕ್ಕೂ ಚಾತಕ ಪಕ್ಷಿಯಂತೆ ಕಾಯುವುದು ಸಮಾಜದ ದೌರ್ಭಾಗ್ಯವಲ್ಲದೆ ಇನ್ನೇನು?

-**ಮೋಹನದಾಸ ಕಿಣಿ** ಕಾಪು.

# ವರ್ಗಾವಣೆಗೆ ಶಿಫಾರಸು ಅವ್ಯವಹಾರ ಅಷ್ಟೇ ಅಲ್ಲ ಅಪರಾಧ!



ಕಾನೂನು

ಉಮಾ ಮಹೇಶವೈದ್ಯ
editoped@vishwavani.news

ಇತ್ತೀಚೆಗೆ ಒಬ್ಬ ಪ್ರಭಾವಿ ರಾಜಕಾರಣಿಗಳ ಮನೆಗೆ ಹೋಗುವ ಸಂದರ್ಭ ಬಂದಿತ್ತು. ಬೆಳಗಿನ ಸಮಯದಲ್ಲಿಯೇ ಹೋಗಿದ್ದರಿಂದ ಯಾವುದೇ ಸಾರ್ವಜನಿಕರು ಇರಲಿಕ್ಕಿಲ್ಲವೆಂದು ಭಾವಿಸಿದ್ದೆ. ಆದರೆ ಅಚ್ಚರಿ ಎನ್ನುವಂತೆ, ಜಿಲ್ಲಾಧಿಕಾರಿಗಳೊನ್ನೊಳಗೊಂಡು, ಪಿಎಸ್‌ಐ ವರೆಗಿನ ಅನೇಕ ಹುದ್ದೆಯ ಸರಕಾರಿ ಅಧಿಕಾರಿಗಳು ಕೈಯಲ್ಲಿ ಪುಷ್ಪಗುಚ್ಛವನ್ನು ಹಿಡಿದುಕೊಂಡು, ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ನಿಂತ ಭಕ್ತರಂತೆ ಸಾಲಾಗಿ ನಿಂತುಕೊಂಡಿದ್ದರು. ಒಳಗಿನ ಕೋಣೆಯಿಂದ ಬುಲಾವು ಬಂದ ತಕ್ಷಣ, ಸಾಲಾಗಿ ಆಜ್ಞಾಪಾಲಕರಂತೆ ಆ ಪ್ರಭಾವಿ ರಾಜಕಾರಣಿ ಮುಂದೆ ವಿನಮ್ರವಾಗಿ ಕೈಜೋಡಿಸಿ, ಸಲ್ಯೂಟ ಹೊಡೆದು ಕೈಯಲ್ಲಿದ್ದ ಹೂಗುಚ್ಛವನ್ನು ನೀಡಿ, ತಮ್ಮ ವರ್ಗಾವಣೆಗೆ ದಯವಿಟ್ಟು ಶಿಫಾರಸು ಮಾಡಲು ವಿನಂತಿಸಿಕೊಂಡು, ಆಪ್ತ ಕಾರ್ಯದರ್ಶಿಯಿಂದ ಶಿಫಾರಸು ಪತ್ರ (ಮಿನಿಟ್ಸ) ಪಡೆದು, ದೇವರ ಪ್ರಸಾದವೇ ಸಿಕ್ಕಷ್ಟು ಪುನೀತ ಭಾವದಿಂದ ಹೊರ ಬರುತ್ತಿದ್ದರು. ಜೇಬು ಹಗುರವಾದ ವಿಷಾದ ಭಾವ ಒಂದೆಡೆ ಇದ್ದರೆ, ಆಯಕಟ್ಟಿನ ಸ್ಥಳಕ್ಕೆ ವರ್ಗಾವಣೆ ದೊರೆಯುವ ಹುಮಸ್ಸು ಇನ್ನೊಂದೆಡೆ ಅವರ ಮುಖದ 'ಲ್ಲಿ ಕಂಡುಬರುತ್ತಿದ್ದವು. ಇದನ್ನೆಲ್ಲಾ ಗಮನಿಸುತ್ತಿದ್ದಾಗ ಕಂಡ ಬಂದ ಅಂಶವೆಂದರೆ, ವರ್ಗಾವಣೆ ಬಯಸಿ ಬರುವ ಸರಕಾರಿ ಅಧಿಕಾರಿಗಳು ಹಾಗೂ ಸರಕಾರಿ ನೌಕರರು ಈ ಮಿನಿಟ್ಸ ಎನ್ನುವ ವಿಟ್ಯಾಮಿನ್ ಇಲ್ಲದೇ ತಮ್ಮ ಕೆಲಸ ಸಾಧಿಸಲಾರರು ಎಂಬ ಅನಿವಾರ್ಯ ಮನೋಸ್ಥಿತಿ ತಲುಪಿದ್ದಾರೆ ಎಂದು.

ಸರಕಾರದ ಎಲ್ಲ ಇಲಾಖೆಗಳಲ್ಲಿ, ನೇಮಕಾತಿಗೆ ಪ್ರತ್ಯೇಕವಾಗಿರುವ ನಿಯಮಾವಳಿಗಳಂತೆ ವರ್ಗಾವಣೆಗೂ ಕೂಡಾ ಪ್ರತ್ಯೇಕ ನೀತಿ ನಿಯಮಗಳನ್ನು ರೂಪಿಸಲಾಗಿರುತ್ತದೆ. ಪ್ರತಿ ವರ್ಷ ಕೇವಲ ಪ್ರತಿ ಶತ 4-5 ರಷ್ಟು ಮಾತ್ರ ವರ್ಗಾವಣೆ ಮಾಡಲು ಅವಕಾಶವಿದೆ ಎಂದಾಗ, ಇಲಾಖೆ ಮುಖ್ಯಸ್ಥರು, ಸಂಬಂಧಿಸಿದ ಇಲಾಖಾ ಪ್ರಧಾನ ಕಾರ್ಯದರ್ಶಿಗಳು, ಸಚಿವರು ಆ ಸೀಮಿತ ಅವಕಾಶದಲ್ಲಿ ನೌಕರರನ್ನು ವರ್ಗಾವಣೆ ಮಾಡಲು ಮುಂದಾದಾಗ, ಸಹಜವಾಗಿ ಅಧಿಕಾರಿಗಳು ಹಾಗೂ ನೌಕರರ ನಡುವೆ ಪೈಪೋಟಿ ಶುರು ಆಗುತ್ತದೆ. ಪ್ರತಿಯೊಬ್ಬ ನೌಕರರ, ಅಧಿಕಾರಿಗಳ ವರ್ಗಾವಣೆ ಅರ್ಜಿಯನ್ನು ಪರಿಗಣಿಸುವಾಗ, ವರ್ಗಾವಣಾ ಸಮಿತಿ ಮೊದಲು ಪರಿಗಣಿಸುವದೇ ಆ ವರ್ಗಾವಣಾ ಅರ್ಜಿಯೊಂದಿಗೆ ಲಗತ್ತಿಸಿರುವ ರಾಜಕಾರಣಿಗಳ ಟಿಪ್ಪಣಿಗಳನ್ನು. ಹಾಲಿ ಶಾಸಕರು, ಸಚಿವರು ಹಾಗೂ ಮುಖ್ಯವಾಗಿ ವರ್ಗಾವಣೆ ಬಯಸಿದ ಕ್ಷೇತ್ರದ ಜನಪ್ರತಿನಿಧಿಯ ಅದರಲ್ಲೂ ಆಡಳಿತ ಪಕ್ಷದ ಶಾಸಕರ ಟಿಪ್ಪಣಿಗಳು ಆ ವರ್ಗಾವಣೆ ಅರ್ಜಿಯ ತೂಕವನ್ನು ಹೆಚ್ಚಿಸಿ, ವರ್ಗಾವಣಾ ಸಮಿತಿಗೆ ಆ ಅರ್ಜಿಯನ್ನು ಪುರಸ್ಕರಿಸುವ ಅನಿವಾರ್ಯ ಸೃಷ್ಟಿಸುತ್ತವೆ.

ಇನ್ನುಳಿದಂತೆ ವರ್ಗಾವಣೆ ಅವಧಿಯನ್ನು ಹೊರತು ಪಡಿಸಿ, ಬಯಸಿದಾಗ ವರ್ಗಾವಣೆಗೆ ಮುಖ್ಯಮಂತ್ರಿಗಳ ಅನುಮೋದನೆ ಕಡ್ಡಾಯ. ಆಗ ಮುಖ್ಯಮಂತ್ರಿಗಳನ್ನು ಮುಖತಃ ಎಂದೂ ನೋಡದ ಅಧಿಕಾರಿಗಳಿಗೆ, ನೌಕರರಿಗೆ ಅವರಿಂದ ಶಿಫಾರಸು, ಅನುಮೋದನೆ ಪಡೆಯುವುದು ಗಗನ ಕುಸುಮವೇ ಸರಿ. ಆಗ ಮತ್ತೆ ಅವರು ಮೊರೆ ಹೋಗುವುದು ರಾಜಕೀಯ ನಾಯಕರನ್ನು. ಅಧಿಕಾರಿಗಳು, ನೌಕರರು ತಮ್ಮ ಹುದ್ದೆಗೆ ಇರುವ ಗೌರವ, ಮಾನ, ಮರ್ಯಾದೆಯನ್ನು ಬದಿಗಿಟ್ಟು ಈ ಮಿನಿಟ್ಸಗಳನ್ನು ಪಡೆಯಲು ಹರಸಾಹಸ ಮಾಡುತ್ತಾರೆ. ಯಾವುದೇ ಬೆಲೆ ಕೊಟ್ಟು ಟಿಪ್ಪಣಿಗಳನ್ನು ಖರೀದಿಸಲು ತುದಿಗಾಲ ಮೇಲೆ ನಿಂತುಕೊಂಡಿರುತ್ತಾರೆ. ಇವರೆಲ್ಲಾ ಸೇರಿ ಭ್ರಷ್ಟಾಚಾರ ತಡೆ ಅಧಿನಿಯಮದಡಿ ಅಪರಾಧವೆಸಗುತ್ತಿದ್ದಾರೆಯೇ ಎನ್ನುವ ಪ್ರಶ್ನೆ ಏಳುತ್ತದೆ.

ಇತ್ತೀಚೆಗೆ ಭ್ರಷ್ಟಾಚಾರ ತಡೆ ಅಧಿನಿಯಮದ ಎಲ್ಲ ಕಲಂಗಳನ್ನು ಕೇಂದ್ರ ಸರಕಾರ ತಿದ್ದುಪಡಿ ಮಾಡಿ, ಹಿಂದಿನ ಕಾನೂನಿನಲ್ಲಿಯ ಅನೇಕ ಶಬ್ದಗಳನ್ನು ತೆಗೆದು ಹಾಕಿ, 'ಅನುಚಿತ ಲಾಭದ ಉದ್ದೇಶದಿಂದ ಅನುಚಿತ ಅಥವಾ ಅಪ್ರಾಮಾಣಿಕ ಸಾರ್ವಜನಿಕ ಕರ್ತವ್ಯ ನಿರ್ವಹಣೆಯನ್ನು ಮಾಡುವ ಅಥವಾ ಸರಿಯಾದ ಕ್ರಮದಲ್ಲಿ ಮಾಡದೇ ಇರುವ ಕೃತ್ಯ' ಎನ್ನುವ ಹೊಸ ವ್ಯಾಖ್ಯಾನಗಳನ್ನು ಸೇರಿಸಿ ಹೊಸೆದ ಹೊಸ ಅಪರಾಧಿಕ ವ್ಯಾಖ್ಯಾನಗಳು ಇನ್ನು ಮುಂದೆ ರಾಜಕಾರಣಿಯಾಗಲಿ, ಸರಕಾರಿ ಅಧಿಕಾರಿಯಾಗಲಿ ಅಥವಾ ಯಾವುದೇ ಪ್ರಭಾವಿ ವ್ಯಕ್ತಿಯಾಗಲಿ ತಮ್ಮ ವೈಯಕ್ತಿಕ ಲಾಭಗಳಿಗೆ ಸರಕಾರಿ ಅಧಿಕಾರಿಗಳನ್ನು ಬಳಸಿಕೊಳ್ಳಲು, ಅವರಿಗೆ ಮಿನಿಟ್ಸ ನೀಡಿ, ಆ ಮೂಲಕ ವರ್ಗಾವಣೆ ಮಾಡಿಸಿಕೊಂಡು ಬಂದರೆ ಈ ಅಧಿನಿಯಮದಡಿ ಕಾನೂನು ಕ್ರಮಕ್ಕೆ ಪಾತ್ರರಾಗುತ್ತಾರೆ.

ಶಾಸಕರಿಗೆ, ಪ್ರಭಾವಿ ರಾಜಕಾರಣಿಗಳಿಗೆ ತಮ್ಮ ಕ್ಷೇತ್ರದಲ್ಲಿ ಸರಕಾರದ ಯೋಜನೆಗಳನ್ನು ಪರಿಣಮಕಾರಿಯಾಗಿ ಅನುಷ್ಠಾನ ಮಾಡಬೇಕು ಎಂಬ ಹಿರಿದಾಸೆಯಿಂದ, ತಾವೇ ಸ್ವಯಂ ಸ್ಫೂರ್ತಿಯಿಂದ ಇಂಥದೇ ಅಧಿಕಾರಿ ಅಥವಾ ನೌಕರರನ್ನು ತಮ್ಮ ಕ್ಷೇತ್ರಕ್ಕೆ ವರ್ಗಾವಣೆ ಮಾಡಿ ಎಂದು ವಿನಂತಿಸಿಕೊಳ್ಳುವುದು ಅವರ ಯಾವುದೇ ಶಾಸನಾತ್ಮಕ ಕರ್ತವ್ಯದಡಿ ಬರುವುದಿಲ್ಲ. ಸದ್ಯ ಇರುವ ಯಾವುದೇ ಕಾನೂನಿನಡಿ ಈ ರೀತಿಯಾಗಿ ವರ್ಗಾವಣೆಗೆ ಮಿನಿಟ್ಸ ಕೊಡಲು ಅವರಿಗೆ ಅಧಿಕಾರ ನೀಡಿದ ಯಾವುದೇ ಉಪಬಂಧಗಳಿಲ್ಲ. ಆದರೆ, ಸರಕಾರಿ ನೌಕರರು ತಮ್ಮ ವರ್ಗಾವಣೆಗೆ ಯಾವುದೇ ರಾಜಕೀಯ ಅಥವಾ ರಾಜಕೀಯೇತರ ಶಿಫಾರಸು ತಂದರೆ ಅಥವಾ ಬಳಸಿಕೊಂಡರೆ ಅದನ್ನು ಗಂಭೀರವಾದ ದುರ್ವರ್ತನೆ ಎಂದು ಪರಿಗಣಿಸಲಾಗುವುದು ಎಂದು ಸರಕಾರದ ಸುತ್ತೋಲೆಗಳು ಇವೆ. ಅಂದರೆ ಇವು ಪರೋಕ್ಷವಾಗಿ ರಾಜಕಾರಣಿಗಳ ಮಿನಿಟ್ಸ ನೀಡುವಿಕೆಯನ್ನು ಹಾಗೂ ಪ್ರಭಾವ ಬಳಸುವಿಕೆಯನ್ನು ನಿಷೇಧಗೊಳಿಸುತ್ತದೆ . ಈ ರೀತಿಯ ನಿಷೇಧಿತ ಕೃತ್ಯವನ್ನು ಎಸಗುವುದು ಹಾಗೂ ಎಸಗುವಂತೆ ಪ್ರೇರೇಪಿಸುವುದು ಕಾನೂನಿನಡಿ ಅಪರಾಧಿಕ ಕೃತ್ಯಗಳಾಗುತ್ತವೆ.

ಅಂತಹುದರಲ್ಲಿ ರಾಜಕಾರಣಿಗಳು ಅನುಚಿತ ಲಾಭವನ್ನು ಪಡೆದು ಟಿಪ್ಪಣಿ ನೀಡಿದರೆ, ಅದು ವರ್ಗಾವಣಾ ಸಮಿತಿಯಲ್ಲಿಯ ಅಧಿಕಾರಿಗಳನ್ನು ತಮ್ಮ ಕರ್ತವ್ಯವನ್ನು ವರ್ಗಾವಣಾ ನೀತಿಯಂತೆ ನಿರ್ವಹಿಸಲು ನಿರ್ಬಂಧಿಸಿದರೆ, ಅದು ಭ್ರಷ್ಟಾಚಾರ ತಡೆ ಅಧಿನಿಯಮದ ಕಲಂ 7 (ಎ), ಅಡಿ ನಿಶ್ಚಿತವಾಗಿ ಶಿಕ್ಷಾರ್ಹ ಅಪರಾಧವಾಗುತ್ತದೆ.

ಅದೇ ರೀತಿ ಒಂದು ವೇಳೆ, ಆ ಪ್ರಭಾವಿ ರಾಜಕಾರಣಿ, ಶಾಸಕರು, ಸಚಿವರು ಆ ಅಧಿಕಾರಿಗಳಿಂದ/ನೌಕರರಿಂದ ಯಾವುದೇ ಪ್ರತಿಫಲ ಪಡೆಯದೇ, ವರ್ಗಾವಣೆಗೆ ಮಿನಿಟ್ಸ ನೀಡಿ, ಮುಂದೆ ವರ್ಗಾವಣೆ ಆದ ನಂತರ ಆ ಅಧಿಕಾರಿಗಳಿಂದ ಅಥವಾ ನೌಕರರಿಂದ ಅದನ್ನು ನಿರೀಕ್ಷಿಸುವುದೂ ತಪ್ಪು. ಹಾಗೆ ಮುಂದೆ ತಮಗೆ ಅನುಕೂಲವಾಗಲೆಂದು, ಅವರಿಂದ ಅನುಚಿತ ಕರ್ತವ್ಯ ಅಥವಾ ಕರ್ತವ್ಯದ ಲೋಪದ ಮೂಲಕ ಅಕ್ರಮ ಲಾಭವನ್ನು ಪಡೆಯುವ ದುರುದ್ದೇಶದಿಂದ ನೀಡುವ ಮಿನಿಟ್ಸ, ಆ ರಾಜಕಾರಣಿಗೆ ಬಂದೀಖಾನೆಯ ದಾರಿಯನ್ನು ತೋರಿಸುತ್ತದೆ. ಏಕೆಂದರೆ ಈಗ ತಿದ್ದುಪಡಿಗೊಂಡ ಭ್ರಷ್ಟಾಚಾರ ತಡೆ ಅಧಿನಿಯಮದ ಕಲಂ 7(ಸಿ) ಸ್ಪಷ್ಟವಾಗಿ ಹೇಳುವುದೇನೆಂದರೆ, ಮುಂದೊಂದು ದಿನ ಅನುಚಿತ ಸೇವೆ ಅಥವಾ ಅಕ್ರಮ ಲಾಭ ಪಡೆಯಬೇಕೆಂಬ ದುರುದ್ದೇಶದಿಂದ ಶಿಫಾರಸು ಪತ್ರಗಳನ್ನು ನೀಡುವುದು ಕೂಡಾ ಅಪರಾಧಿಕ ಕೃತ್ಯವಾಗುತ್ತದೆ.

ಇದನ್ನು ಉದಾಹರಣೆ ಸಮೇತ ಅರ್ಥ ಮಾಡಿಕೊಳ್ಳಬೇಕೆಂದರೆ, ಒಬ್ಬ ಶಾಸಕರು ತಮ್ಮೂರಿನ ಪೊಲೀಸ ಠಾಣೆಗೆ ಒಬ್ಬ ಸಬ್ ಇನ್ಸಪೆಕ್ಟರರನ್ನು ಮಿನಿಟ್ಸ ನೀಡಿ ವರ್ಗಾವಣೆ ಮಾಡಿಸಿಕೊಂಡು ಬರುತ್ತಾರೆ ಎಂದುಕೊಳ್ಳೋಣ. ಕೆಲ ದಿನಗಳ ನಂತರ ಆ ಸಬ್ ಇನ್ಸಪೆಕ್ಟರ, ಆ ಶಾಸಕರ ಅಥವಾ ಅವರ ಹಿಂಬಾಲಕರು ತೊಡಗಿಕೊಂಡಿರುವ ಕೆಲವು ಅಕ್ರಮ ಕೃತ್ಯಗಳಿಗೆ ರಕ್ಷಣೆ ನೀಡಿದರೆ, ತಕ್ಷಣವೇ ಶಾಸಕರೂ, ಸಬ್ ಇನ್ಸಪೆಕ್ಟರ ಕೂಡಾ ಈ ಕಲಂ 7(ಸಿ) ಅಡಿ ಅಪರಾಧವೆಸಗಿ ಶಿಕ್ಷೆಗೆ ಅರ್ಹರಾಗುತ್ತಾರೆ. ಒಂದು ವೇಳೆ ಸುದ್ದಿ ವಾಹಿನಿಗಳು ನಡೆಸುವ 'ಸ್ಟಿಂಗ ಆಪರೇಷನ್'ನಲ್ಲಿ, ನೌಕರರು, ಅಧಿಕಾರಿಗಳು ಹಾಗೂ ರಾಜಕಾರಣಿಗಳು ಅಥವಾ ಅವರ ಹಿಂಬಾಲಕರು ಕೂಡಿ ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ಕೈಗೂಡಿಸಿದ್ದರೆ, ಈ ನೌಕರರು, ಅಧಿಕಾರಿಗಳ ವರ್ಗಾವಣೆಯಲ್ಲಿ ಈ ಮಿನಿಟ್ಸಗಳ ಮೇಲಾಟ ಏನಾದರೂ ಕಂಡುಬಂದರೆ ತಕ್ಷಣ ಇವರ ವಿರುದ್ಧ ಭ್ರಷ್ಟಾಚಾರ ಅಧಿನಿಯಮದಡಿ ಪ್ರಕರಣ ದಾಖಲಿಸಬಹುದು. ಈ ಎಲ್ಲ ಅಪರಾಧಗಳನ್ನು ಸಾಬೀತುಪಡಿಸಲು ಈ ರಾಜಕಾರಣಿಗಳು ನೀಡುವ ಮಿನಿಟ್ಸಗಳೇ ಪ್ರಮುಖ ದಾಖಲು ಸಾಕ್ಷ್ಯಗಳಾಗಿ ಮಾರ್ಪಾಡಾಗುತ್ತವೆ ಎನ್ನುವುದೇ ಸಂದರ್ಭದ ವ್ಯಂಗ್ಯ.

ಚುನಾವಣಾ ಸಮಯದಲ್ಲಿ , ಕೃಪಾಪೋಷಿತ ನೌಕರರ ವರ್ಗ ತಮ್ಮ ಋಣ ತೀರಿಸಲು ಮಿನಿಟ್ಸ್ ನೀಡಿದ ಶಾಸಕರು ಅಥವಾ ರಾಜಕಾರಣಿಯ ಪರವಾಗಿ ಪಕ್ಷಪಾತದಿಂದ ಕೆಲಸ ನಿರ್ವಹಿಸಿದರೆ ಅದು ಸಹ, ಈ ಭ್ರಷ್ಟಾಚಾರ ತಡೆ ಅಧಿನಿಯಮದ ಅಡಿ ಅಪರಾಧವಾಗುತ್ತದೆ ಎಂಬುದನ್ನು ಮರೆಯಬಾರದು.

ಇನ್ನೊಂದು ಮುಖ್ಯ ಅಂಶವೆಂದರೆ, ತಿದ್ದುಪಡಿಯಾದ ಭ್ರಷ್ಟಾಚಾರ ಅಧಿನಿಯಮದಡಿ ಕಲಂ 8 ಈಗ ಈ ವರ್ಗಾವಣೆ ದಂಧೆಯನ್ನೇ ತಮ್ಮ ಎಲ್ಲ ವೈಭೋಗಗಳಿಗೆ ದಾರಿ ಮಾಡಿಕೊಂಡಿರುವ ಏಜಂಟರುಗಳಿಗೆ ಸಿಂಹಸ್ವಪ್ನವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ: 'ಯಾವುದೇ ವ್ಯಕ್ತಿ ಅಥವಾ ಸಾರ್ವಜನಿಕ ನೌಕರ, ತನಗೆ ಯಾವುದೋ ಒಂದು ಅನುಚಿತ ಲಾಭ ನೀಡುವ ಅಥವಾ ನೀಡುವಿಕೆ ಬಗ್ಗೆ ವಚನದ ಮೂಲಕ ಇನ್ನೊಬ್ಬ ಸಾರ್ವಜನಿಕ ನೌಕರನಿಗೆ ಆತನ ಸಾರ್ವಜನಿಕ ಕರ್ತವ್ಯವನ್ನು ಅನುಚಿತವಾಗಿ ನಿರ್ವಹಿಸುವಂತೆ ಒತ್ತಾಯ, ಪ್ರಲೋಭನೆ ಇತ್ಯಾದಿ ನೀಡುವುದು ಶಿಕ್ಷಾರ್ಹ ಅಪರಾಧ'. ಇದರಿಂದ ತನಗೆ , ಸಚಿವರು ಗೊತ್ತು, ವಿಧಾನ ಸೌಧದಲ್ಲಿ ಹಿರಿಯ ಅಧಿಕಾರಿಗಳು ಗೊತ್ತು, ಇಷ್ಟು ಹಣ ಕೊಟ್ಟರೆ ಆ ಸಚಿವರು, ಶಾಸಕರಿಗೆ ಅಥವಾ ಅಧಿಕಾರಿಗಳಿಗೆ ಹೇಳಿ ಅಥವಾ ಕೊಟ್ಟು ನಿಮ್ಮ ವರ್ಗಾವಣೆ ಮಾಡಿಸಿಕೊಡುತ್ತೇನೆಂದು ಹೇಳುವುದು ಇನ್ನು ಕೇವಲ ಮೋಸದ ಅಪರಾಧಗಳಲ್ಲ, ಭ್ರಷ್ಟಾಚಾರ ತಡೆ ನಿಯಮದಡಿ ದಾಖಲಾಗುವ ಅಪರಾಧಗಳಾಗುತ್ತದೆ.

ಸರಕಾರಿ ಕಾಮಗಾರಿಗಳನ್ನು ಇಂಥದೇ ಗುತ್ತಿಗೆದಾರನಿಗೆ ನೀಡಬೇಕು ಎಂದು ಶಿಫಾರಸು ಮಾಡಿ ಕಳಪೆ ಕಾಮಗಾರಿ ಮಾಡಲು ಅವಕಾಶ ನೀಡಿದ ರಾಜಕಾರಣಿಗಳು, ಗುತ್ತಿಗೆದಾರರು ಕೂಡಾ ಈಗ ಈ ಕಾಯಿದೆ ಅಡಿ ಅಪರಾಧಿಗಳಾಗುತ್ತಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ನಿಮ್ಮ ಮನೆಯ ಮುಂದಿನ ರಸ್ತೆ ಕಾಮಗಾರಿಯನ್ನು ಗುತ್ತಿಗೆ ಪಡೆದ ಗುತ್ತಿಗೆದಾರ ಕಳಪೆಯಾಗಿ ಅದನ್ನು ಮಾಡಿದ್ದರೂ, ಅದು ಸರಿಯಾಗಿದೆ ಎಂದು ನಿಮ್ಮ ಭಾಗದ ಜನಪ್ರತಿನಿಧಿಗಳು ಹೇಳಿದರೆ ಅಥವಾ ಆತನ ಗುತ್ತಿಗೆ ಹಣವನ್ನು ಕೊಡಿಸುವಲ್ಲಿ ಪಾತ್ರವಹಿಸಿದ್ದು ಕಂಡು ಬಂದರೆ, ಕೂಡಲೇ ಅವರ ವಿರುದ್ಧ ಪ್ರಕರಣ ದಾಖಲಿಸಬಹುದು.

ಈ ಜನಪ್ರತಿನಿಧಿಗಳ, ರಾಜಕಾರಣಿಗಳ ಮಿನಿಟ್ಸಗಾಗಿ ಕಾಯ್ದು ನಿಲ್ಲುವ ಅಧಿಕಾರಿಗಳು ಹಾಗೂ ನೌಕರರು, ಜಾಣ್ಮೆಯಲ್ಲಿ, ಆಡಳಿತ ನಡೆಸುವ ಕೌಶಲದಲ್ಲಿ ಎಷ್ಟೋ ಪಾಲು ಅವರಿಗಿಂತ ಸಿದ್ಧಹಸ್ತರು, ಕಾನೂನು ನಿಯಮಗಳನ್ನು ಬಲ್ಲವರು. ಆದರೆ ತಾವು ಬಯಸಿದ ಹುದ್ದೆ ಗಿಟ್ಟಿಸಿಕೊಳ್ಳಲು, ಆಯಕಟ್ಟಿನ ಸ್ಥಳಕ್ಕೆ ಹೋಗಿ ಲೂಟಿಮಾಡುವ ಹುನ್ನಾರದಲ್ಲಿ, ತಮ್ಮ ಎಲ್ಲ ಸ್ವಾಭಿಮಾನ, ಸಮಾಜ ಸೇವೆ ಬಲಿ ಕೊಟ್ಟು, ವಚನಭ್ರಷ್ಟರಾಗುತ್ತಿದ್ದಾರೆ. ಅಧಿಕಾರಶಾಹಿ ಈಗ ಖಂಡಿತ ಎಚ್ಚೆತ್ತುಕೊಳ್ಳಬೇಕಾದ ಸಮಯ ಬಂದಿದೆ. ತಮ್ಮ ವೈಯಕ್ತಿಕ ಅನಾನುಕೂಲತೆಗೆ ಅಥವಾ ಲಾಭಕ್ಕೆ ಅಥವಾ ಪ್ರತಿಷ್ಠೆಗೆ ವರ್ಗಾವಣೆ ಬಯಸಿ ಅರ್ಜಿಯನ್ನು ಸಲ್ಲಿಸಿದಾಗ, ಅದನ್ನು ಸರಕಾರ ರೂಪಿಸಿರುವ ನೀತಿ ನಿಯಮಗಳನುಸಾರ ಇರುವಂತೆ ನೋಡಿಕೊಂಡು, ಯಾವುದೇ ರಾಜಕೀಯ ಪ್ರಭಾವವನ್ನು ಬಳಸಿಕೊಳ್ಳದೇ ಕಾನೂನು ಬದ್ಧವಾಗಿ ವರ್ಗಾವಣೆ ಪಡೆದುಕೊಳ್ಳುವುದು ಸೂಕ್ತ. ಇಲ್ಲದಿದ್ದಲ್ಲಿ, ಇಲಾಖಾ ವಿಚಾರಣೆ ಜೊತೆ, ನ್ಯಾಯಾಲಯಗಳಲ್ಲಿ ಈ ಭ್ರಷ್ಟಾಚಾರ ತಡೆ ಅಧಿನಿಯಮದಡಿ ಅಪರಾಧವೆಸಗಿದ ಬಗ್ಗೆ ಆರೋಪಿಯಾಗಿ ನಿಲ್ಲಬೇಕಾಗುತ್ತದೆ.

ವರ್ಗಾವಣೆ ದಂಧೆಯನ್ನು ಕೇವಲ ಒಂದು ಆಡಳಿತ ಯಂತ್ರದ ದುರುಪಯೋಗ ಎನ್ನುವುದಾದರೆ, ಈ ವ್ಯವಸ್ಥಿತ ಚಟುವಟಿಕೆಗಳಲ್ಲಿ ತೊಡಗಿರುವ ಎಲ್ಲ ವ್ಯಕ್ತಿಗಳು ಮುಂದೆ ವ್ಯವಸ್ಥಿತ ಅಪರಾಧಿಕ ಚಟುವಟಿಕೆಗಳ ಅಕ್ರಮ ಕೂಟದ ಭಾಗಿಗಳೆಂದು ಪರಿಗಣಿಸಲು ಬರುತ್ತದೆ. ಹಾಗಾಗಿ, ಈ ಎಲ್ಲ ವ್ಯಕ್ತಿಗಳ ವಿರುದ್ಧ ಮೊದಲು ಕನಿಷ್ಠ ಎರಡು ಈ ಭ್ರಷ್ಟಾಚಾರ ಕಾಯಿದೆ ಅಡಿ ಪ್ರಕರಣಗಳು ದಾಖಲಾದರೆ ಮುಂದಿನ ಕ್ರಮವಾಗಿ 'ಕೋಕಾ' ಕಾಯಿದೆಯನ್ನು ಈ ಎಲ್ಲ ವರ್ಗಾವಣೆ ದಂಧೆಯಲ್ಲಿ ತೊಡಗಿಕೊಂಡಿರುವರ ಮೇಲೆ ದಾಖಲಿಸಬಹುದು. ಇಷ್ಟು ಗಂಭೀರವಾಗಿರುವ ವರ್ಗಾವಣೆ ದಂಧೆಗಳು ನಮ್ಮ ಶಕ್ತಿ ಸೌಧದಲ್ಲಿಯೇ ಬೇರೂರಿರುವುದು ನಿಜಕ್ಕೂ ವಿಪರ್ಯಾಸವೇ ಸರಿ. ಇನ್ನಾದರೂ ನಮ್ಮ ಜನ ಪ್ರತಿನಿಧಿಗಳು, ಯಾವುದೇ ಶಿಫಾರಸು, ಮಿನಿಟ್ಸಗಳನ್ನು ಕೊಡುವ ಮೊದಲು ಈ ಭ್ರಷ್ಟಾಚಾರ ತಡೆ ಅಧಿನಿಯಮದ ತಿದ್ದುಪಡಿ ಕಲಂಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ. ಇಲ್ಲದಿದ್ದಲ್ಲಿ ಸಂಕಷ್ಟಗಳ ಸಂಕೋಲೆಗೆ ತಮ್ಮನ್ನು ತಾವೇ ತೆರೆದುಕೊಳ್ಳುತ್ತಾರೆಂಬುದನ್ನು ಮರೆಯಬಾರದು. ಈ ದಾರಿಯಿಂದಲಾದರೂ ವರ್ಗಾವಣೆಯ ಕರಾಳ ದಂಧೆಯ ಎಲ್ಲ ದಾರಿಗಳು ಮುಚ್ಚಲಿ ಎಂಬುದೇ ಜಾಗೃತ ಪ್ರಜೆಗಳ ಆಶಯ.

# ಸರಕಾರ ಅಸ್ಥಿರಗೊಳಿಸಲು ಕುತಂತ್ರ-ಷಡ್ಯಂತ್ರ ಮಾಡಬೇಕೇ?!



ವಿಮರ್ಶೆ

ಕೆ.ಎಂ. ಶಿವಪ್ರಸಾದ್
editoped@vishwavani.news

ಐದು ವರ್ಷಗಳ ಕಾಲ ಸಿದ್ದರಾಮಯ್ಯನವರನ್ನು 'ನಿದ್ರಾಮಯ್ಯ' ಅಂತ ನಿಂದಿಸಿ, ಅವರ ಆಡಳಿತಕ್ಕೆ ಹಿಂದೂ ವಿರೋಧಿ ಬಣ್ಣ ಕಟ್ಟಿ, ಹಾದೀ-ಬೀದಿಯಲ್ಲಿ ಬಾಯಿ ಬಡಿದುಕೊಂಡರೂ ಬಿಜೆಪಿಗೆ ರಾಜ್ಯ ಮತದಾರ ಸಂಪೂರ್ಣ ಅಧಿಕಾರ ನೀಡದೇ ಹೋದದ್ದು ಎಲ್ಲೋ ಒಂದು ಕಡೆ ಬಿಜೆಪಿ ನಾಯಕರನ್ನು ಇನ್ನಿಲ್ಲದ್ದಂತೆ ಚುಚ್ಚಿದೆ, ನಿದ್ದೆಗೆಡಿಸಿದೆ. ಹೇಗಾದರೂ ಸರಿಯೇ ಅಧಿಕಾರ ಪಡೆದೇ ತೀರಬೇಕೆಂಬ ಹಠಕ್ಕೆ ಬಿದ್ದಿರುವ ರಾಜ್ಯ ಭಾಜಪ ನಾಯಕರು ಕುಮಾರಸ್ವಾಮಿಯ ಮೇಲೂ ಅದೇ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದು ಮಾತಿಗೆ ಮುಂಚೆ '37 ಸೀಟಿನಿಂದ ಮುಖ್ಯಮಂತ್ರಿಯಾಗಿದ್ದೀರಿ, ನಿಮಗೆ ಜನ ಬೆಂಬಲ ಇಲ್ಲ, ಕೇವಲ ದಕ್ಷಿಣ ಕರ್ನಾಟಕಕ್ಕೆ ಮಾತ್ರ ನೀವು ಮುಖ್ಯಮಂತ್ರಿ ಉತ್ತರ ಕರ್ನಾಟಕಕ್ಕಲ್ಲ, ನಾಲಾಯಕ್ ಮುಖ್ಯಮಂತ್ರಿ, ವಚನ ಭ್ರಷ್ಟ ನಾಯಕ ಹಾಗೇ-ಹೀಗೆ' ಎಂಬೆಲ್ಲಾ ಹೇಳಿಕೆಗಳು, ಕುಹಕಗಳನ್ನು ಆಡುತ್ತಾ ದಿನಕ್ಕೊಂದು ವಿವಾದಗಳನ್ನು ಸೃಷ್ಟಿಸಿ ಆ ವಿವಾದಗಳ ಮೂಲಕವೇ ಅವರನ್ನು ಹಣಿದು ಈ ಸರಕಾರ ವನ್ನು ಅಸ್ಥಿರಗೊಳಿಸಬೇಕೆಂದು ಬೃಹನ್ನಾಟಕವಾಡುತ್ತಿದ್ದಾರೆ. ರಾತ್ರಿ ಬೆಳಗಾಗುವುದರೊಳಗೆ ಎಲ್ಲ ಸಮಸ್ಯೆಗಳಿಗೂ ಪರಿಹಾರ ಮಾಡಬೇಕೆಂದು ಬೇಡಿಕೆ ಮುಂದಿಡುತ್ತಿರುವ ಘಟಾನುಘಟಿ ಜನನಾಯಕರು ಮತ್ತು ಹೋರಾಟಗಾರರು ಸತ್ಯಕ್ಕಿಂತ ಸುಳ್ಳನ್ನೇ ದೊಡ್ಡ ಮಟ್ಟದಲ್ಲಿ ಹರಡುತ್ತಾ ಸುಳ್ಳನ್ನೇ ಸತ್ಯವಾಗಿಸಲು ಹೊರಟಿದ್ದಾರೆ.

ಹೌದು, ಇತ್ತೀಚಿನ ಕೆಲ ದಿನಗಳಿಂದ ಮುಖ್ಯಮಂತ್ರಿಯನ್ನು 'ವಿವಾದ ಕುಮಾರ'ರನ್ನಾಗಿಸಲು ನಡೆಸುತ್ತಿರುವ ಷಡ್ಯಂತ್ರ ಮಾತ್ರ ತೀರಾ ಅಸಹ್ಯ ಹುಟ್ಟಿಸುವಂತಿದೆ. ಅದರಲ್ಲೂ ಇಡೀ ದೇಶದಲ್ಲಿ ಯಾವ ಮುಖ್ಯಮಂತ್ರಿಯೂ ಮಾಡದ ದೃಢ ನಿರ್ಧಾರ ಮಾಡಿ, ರೈತರ 46 ಸಾವಿರ ಕೋಟಿ ರು. ಸಾಲ ಮನ್ನಾ ಮಾಡಿರುವ ಕುಮಾರಸ್ವಾಮಿಯನ್ನು ಕೇವಲ ಒಂದು ಭಾಗದ ಮುಖ್ಯಮಂತ್ರಿಯಷ್ಟೇ ಎಂಬಂತೆ ಪ್ರಚಾರ ಮಾಡುತ್ತಿರುವುದು, ಅದರ ಹಿಂದಿರುವ ತೀವ್ರ ಅಸಹನೆಯ ವಾತಾವರಣ ಅಕ್ಷಮ್ಯ.

ಕುಮಾರಸ್ವಾಮಿ ಅಧಿಕಾರ ಸ್ವೀಕಾರ ಮಾಡಿದ ದಿನದಿಂದಲೂ ಕೇವಲ ಟೀಕೆಗಳನ್ನು ಹರಿಬಿಡುತ್ತಿರುವ ರಾಜ್ಯ ಬಿಜೆಪಿ ನಾಯಕರು, ರಾಜ್ಯದ ಹಲವಾರು ಜ್ವಲಂತ ಸಮಸ್ಯೆಗಳ ಕುರಿತು, ರಾಜ್ಯದಲ್ಲಿ ಎದುರಾಗಿರುವ ಹಲವಾರು ಅತಿವೃಷ್ಟಿ-ಅನಾವೃಷ್ಟಿ, ಪ್ರಕೃತಿ ವಿಕೋಪಗಳಿಗೆ ಕೇಂದ್ರದಿಂದ ಹೆಚ್ಚುವರಿ ಅನುದಾನ ತರುವ, ನದಿ ನೀರಿನ ಸಮಸ್ಯೆಗಳನ್ನು ಇತ್ಯರ್ಥ ಪಡಿಸುವಂತೆ ಒತ್ತಡ ಹೇರುವ ಸರ್ವ ಪಕ್ಷಗಳ ನಿಯೋಗದಲ್ಲಿ ಇದುವರೆವಿಗೂ ಒಂದೇ-ಒಂದು ಬಾರಿಯೂ ರಾಜ್ಯ ಬಿಜೆಪಿಯ ನಾಯಕರು ಪಾಲ್ಗೊಂಡಿಲ್ಲ. ರಾಜ್ಯದ ರೈತ ಬರಗಾಲದ ಬೇಗುದಿಗೆ ಬಲಿಯಾಗಿ ಸಾಲದ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆಯ ಹಾದಿ ಹಿಡಿದಿದ್ದರೂ ಅದರ ಬಗ್ಗೆ ಎಂದೂ ಚಕಾರವೆತ್ತದವರು ಇದೀಗ, ರಾಜ್ಯದ ಪ್ರತಿಯೊಂದು ಸಮಸ್ಯೆಯನ್ನು ರಾತ್ರಿ ಕಳೆಯುವುದರೊಳಗೆ ಬಗೆಹರಿಸಬಿಡಬೇಕೆಂದು ಒತ್ತಡ ಹೇರುತ್ತಿರುವುದು ಹಾಸ್ಯಾಸ್ಪದ.

ಸಾಲ ಮನ್ನಾ ಯೋಜನೆಯಿಂದ ಹಿಡಿದು, ಕೊಡಗಿನಲ್ಲಾದ ಜಲಪ್ರಳಯ, ಹಾಗೆಯೇ ನಿನ್ನೆ-ಮೊನ್ನೆಯ ಕಬ್ಬು ಬೆಳೆಗಾರರ ಹೋರಾಟದವರೆವಿಗೂ ಇದೇ ಗಿಮಿಕ್ ರಾಜಕಾರಣವನ್ನೇ ಮಾಡ ಹೊರಟಿರುವ ರಾಜ್ಯ ಬಿಜೆಪಿ ನಾಯಕರು ಮತ್ತೊಂದು ತರಹದ ಕೆಟ್ಟ ಸಂಪ್ರದಾಯಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ. ಏಕೆಂದರೆ ಹೀಗಾಗಲೇ ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ಸೂಚಿಸಿರುವ ಬಿಜೆಪಿ ನಾಯಕರು ರಾಜ್ಯವ್ಯಾಪಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ, ಹೋರಾಟ ಮಾಡುವಂತೆ ಸೂಚಿಸಿದ್ದಲ್ಲದೇ, ಬೆಳಗಾವಿ ಅಧಿವೇಶನ ಬಹಿಷ್ಕರಿಸಿ ಲಕ್ಷಕ್ಕೂ ಹೆಚ್ಚು ರೈತರನ್ನು ಸೇರಿಸಿ ಹೋರಾಟ ಮಾಡುವ ಮಾತನಾಡುತ್ತಿದ್ದಾರೆ; ಅದೇ ಪಕ್ಷದ ಉತ್ತರ ಕರ್ನಾಟಕದ ದೊಡ್ಡ-ದೊಡ್ಡ ನಾಯಕರೇ ಆ ಸಕ್ಕರೆ ಕಂಪನಿಗಳ ಮಾಲೀಕರಾಗಿದ್ದಾರೆ ಎಂಬುದರ ಅರಿವಿದ್ದೂ. ಪ್ರತ್ಯೇಕ ಉತ್ತರ ಕರ್ನಾಟಕದ ಪರ ಧ್ವನಿಯೆತ್ತುವ ಉಮೇಶ್ ಕತ್ತಿ ಮತ್ತು ಬಾಲಚಂದ್ರ ಜಾರಕಿಹೊಳಿಯಂತಹ ಮಹಾನ್ ನಾಯಕರೇ ಹತ್ತಾರು ಕೋಟಿ ರು. ಬಾಕಿ ಹಣ ನೀಡದೇ ರೈತರನ್ನು ಸತಾಯಿಸುತ್ತಿರುವುದನ್ನು ಮನಗಣದೇ ಪ್ರತಿಭಟನೆಗೆ ಆದೇಶ ನೀಡಿರುವುದು ನಿಜಕ್ಕೂ ದುರಂತವೇ ಸರಿ.

ರೈತರನ್ನು ವಿಧಾನಸೌಧದ ಮಹಡಿಗೆ ಕರೆತಂದ ಮೊದಲ ಮುಖ್ಯಮಂತ್ರಿಯೆಂದರೆ ಅದು ಕುಮಾರಸ್ವಾಮಿ ಮಾತ್ರ. ಇಂದು ಅವರ ಹೇಳಿಕೆಗಳು, ಮತ್ತು ನಡೆನುಡಿಗಳು, ನಿರ್ಧಾರಗಳನ್ನು ಅದೆಷ್ಟೇ ಟೀಕೆ ಮಾಡಿದರು ಕೂಡ, ಅಭಿವೃದ್ಧಿ ವಿಚಾರದಲ್ಲಿನ ಅವರ ಚಿಂತನೆಗಳು-ಆಲೋಚನೆಗಳು, ಜಾರಿಗೆ ತರಲು ಉದ್ದೇಶಿಸಿರುವ ಯೋಜನೆಗಳು ಅವರ ರೈತಪರವಾದ ಪ್ರಾಮಾಣಿಕ ಕಾಳಜಿಯನ್ನು ಬಿಂಬಿಸುತ್ತಿವೆ. ಅದನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ. ಆದರೆ ಇದ್ಯಾವುದನ್ನು ಅರ್ಥೈಸಿಕೊಳ್ಳದೇ ಬೆಳಗಾವಿಯಲ್ಲಿ ಕಬ್ಬು ಹೋರಾಟಗಾರರು ಹೋರಾಟ ನಡೆಸಿದ ರೀತಿ, ಅವರು ತೋರಿದ ನಡೆವಳಿಕೆಗಳು, ಹೇಳಿಕೆಗಳು, ವರ್ತನೆಗಳು ತೀರಾ ಬಾಲಿಶವಾಗಿದ್ದವು. ರಾಜ್ಯದ ಮುಖ್ಯಮಂತ್ರಿಯೇ ಸಮಸ್ಯೆಯನ್ನು ಬಗೆಹರಿಸುವ ಭರವಸೆ ನೀಡಿದ್ದರೂ, ವಿಧಾನಸೌಧದಲ್ಲೇ ಮಾತುಕತೆ ಮೂಲಕ ಆ ಸಮಸ್ಯೆಗೆ ಪರಿಹಾರ ನೀಡುವ ವಾಗ್ದಾನ ನೀಡಿದರೂ ಸಹ ಇನ್ಯಾರದ್ದೋ ಚಿತಾವಣೆ ಮತ್ತು ಕುತಂತ್ರಗಳಿಗೆ ತಮ್ಮನ್ನು ಬಲಿ ಕುರಿಯನ್ನಾಗಿಸಿಕೊಂಡು ರಾಜ್ಯದ ಮುಖ್ಯಮಂತ್ರಿಯನ್ನೇ ಕೀಳು ಮಟ್ಟದಲ್ಲಿ ನಿಂದಿಸಿದ್ದು ವಿಪರ್ಯಾಸ.

ಕೇವಲ ಯೂರಿಯಾ ಕೇಳಿದ್ದಕ್ಕೆ ಅಂದು ಯಡಿಯೂರಪ್ಪ ಸರಕಾರ ರೈತರ ಮೇಲೆ ಗೋಲಿಬಾರ್ ಅಸ್ತ್ರ ಪ್ರಯೋಗಿಸಿತ್ತು. ಆದರೆ ಇದೇ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರಕಾರ ಬೆಳಗಾವಿಯ ಸುವರ್ಣ ಸೌಧದ ಗೇಟ್ ಒಡೆದು ಕಬ್ಬಿನ ಲಾರಿಯನ್ನು ಒಳ ನುಗ್ಗಿಸಲು ಪ್ರಯತ್ನಿಸಿದರು ಕೂಡ ರೈತರ ಮೇಲೆ ಪೊಲೀಸ್ ಅಸ್ತ್ರ ಪ್ರಯೋಗಿಸಲಿಲ್ಲ. ಅವರ ಮೇಲೆ ಸಲ್ಲದ ಕೇಸುಗಳನ್ನು ಹೇರಲು ಹೊರಡಲಿಲ್ಲ. ಸಲ್ಲಿಲ್ಲ. ಹತ್ತಾರು ವರ್ಷಗಳ ಸಮಸ್ಯೆಯನ್ನು ಕುಮಾರಸ್ವಾಮಿಯ ತಲೆಗೆ ಕಟ್ಟಿ, ಅವರ ಹೇಳಿಕೆಗಳನ್ನು ವಿವಾದವನ್ನಾಗಿಸಿ, ಮಹಿಳೆಯನ್ನು ಮುಂದಿಟ್ಟುಕೊಂಡು ಕಣ್ಣೀರಿನ ರಾಜಕೀಯ ಮಾಡಲು ಹೊರಟಿದ್ದು ಆ ಮಹಾನ್ ರೈತ ಹೋರಾಟಗಾರರಿಗೆ ಶೋಭೆ ತರುವಂಥದ್ದಲ್ಲ ಎಂದಂತೂ ಹೇಳಬೇಕು.



ಮಾತೆತ್ತಿದರೆ ಉತ್ತರ ಕರ್ನಾಟಕವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆಂದು ಬೊಂಬಡ ಹೊಡೆಯುವ ಜಾರಕಿಹೊಳಿ ಬ್ರದರ್ಸ್, ಉಮೇಶ್ ಕತ್ತಿ, ಎಸ್.ಆರ್. ಪಾಟೀಲ್, ಮುರುಗೇಶ್ ನಿರಾಣಿ, ಜೊತೆಗೆ ಉಪ ಚುನಾವಣೆಯ ವಿಜೇತ ಅಭ್ಯರ್ಥಿ ಆನಂದ್ ನ್ಯಾಮನಗೌಡರ ಕುಟುಂಬ ಒಡೆತನದ ಸಕ್ಕರೆ ಕಂಪನಿಗಳೇ ನೂರು ಕೋಟಿಗೂ ಅಧಿಕ ಬಾಕಿ ಹಣ ಪಾವತಿ ಮಾಡಬೇಕಿರುವುದು ನಾಯಕರ ರೈತಪರ ಕಾಳಜಿಯೇ? ಇವರಿಗೆ ಮತ ಹಾಕಿ ಗೆಲ್ಲಿಸುತ್ತಿರುವ ಆ ಮಹಾನ್ ರೈತ ಹೋರಾಟಗಾರರು, ಉತ್ತರ ಕರ್ನಾಟಕ ರೈತರು ಅದೆಷ್ಟು ಪ್ರಜ್ಞಾವಂತರೋ ತಿಳಿಯದು. ಕುಮಾರಸ್ವಾಮಿ ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯಬೇಕಿದ್ದ ಸಭೆಯನ್ನು ಬೆಂಗಳೂರಿಗೆ ವರ್ಗಾಯಿಸಿದ್ದು ಉತ್ತರ ಕರ್ನಾಟಕದ ಮೇಲಿನ ಮಲತಾಯಿ ಧೋರಣೆಯಾದರೆ, ಸ್ವತಃ ತಮ್ಮ ಪಕ್ಷದ ನಾಯಕರೇ ನೀಡಬೇಕಾದ ರೈತರ ಬಾಕಿಯನ್ನು ಕೊಡಿಸದೇ ಕೇವಲ ಗೋಸುಂಬೆ ರಾಜಕಾರಣ ಮಾಡುತ್ತಿರುವ ಯಡಿಯೂರಪ್ಪ ಉತ್ತರ ಕರ್ನಾಟಕದ ಜನರ ಕಣ್ಮಣಿ ಆಗಿರುವುದು ದುರಂತ. ಅವರ ಈ ಢೋಂಗಿ ಮಾತುಗಳು, ಹೋರಾಟದ ಎಚ್ಚರಿಕೆಗಳು, ಭೂತದ ಬಾಯಲ್ಲಿ ಭಗವದ್ಗಿತೆ ಕೇಳಿದ್ದಕ್ಕಿಂತ ಹೋಮ-ಹವನಗಳ ಮಂತ್ರೋಚ್ಚಾರಣೆ ಕೇಳಿದಂತೆ ರಾಜ್ಯದ ಜನರಲ್ಲಿ ಭಾಸವಾಗುತ್ತಿದೆ.

ಅಧಿಕಾರದ ಹಪಾಹಪಿಯಿಂದ ರಾಜ್ಯ ಬಿಜೆಪಿ ನಾಯಕರು ಇನ್ನಿಲ್ಲದ ಷಡ್ಯಂತ್ರ, ಕುತಂತ್ರ, ಜಾತಿ ವಿವಾದಗಳು, ಪ್ರಾದೇಶಿಕ ಅಸಮಾನತೆಯ ಕೂಗೆಬ್ಬಿಸಿ ರಾಜಕೀಯ ಅಸ್ಥಿರತೆ ಸೃಷ್ಟಿಸಲು ಹೊರಟಿರುವುದು ಇಂದಿನ ದಿನಗಳಲ್ಲಿ ಗುಟ್ಟಾಗೇನೂ ಉಳಿದಿಲ್ಲ. ತಿಳಿದೋ-ತಿಳಿಯದೆಯೋ ಮುಖ್ಯಮಂತ್ರಿ ಕುಮಾರಸ್ವಾಮಿ ಆಡುತ್ತಿರುವ ಮಾತುಗಳು ಅವರ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುತ್ತಿವೆ. ಅಲ್ಲದೇ ಅವರ ಸಂಪುಟದ ಕೆಲವು ಸಚಿವರ ನಡವಳಿಕೆ, ಅಸಮರ್ಥತೆ ಕುಮಾರಸ್ವಾಮಿಯ ಆಲೋಚನೆಗಳ ಓಟಕ್ಕೆ ತಡೆಯೊಡ್ಡುತ್ತಿವೆ. ಅದರಲ್ಲೂ ಕಾಂಗ್ರೆಸ್ ನ ಕೆಲವು ನಾಯಕರ ವರ್ತನೆ, ಕಾರ್ಯವೈಖರಿಗಳು ಸಮ್ಮಿಶ್ರ ಸರಕಾರಕ್ಕೆ ಕಪ್ಪು ಚುಕ್ಕೆಯೇ ಸರಿ. ಅಲ್ಲದೆ ಕಳೆದ ಬಾರಿ ಇಪ್ಪತ್ತು ತಿಂಗಳ ಕುಮಾರಸ್ವಾಮಿಯ ಆಡಳಿತವನ್ನು ಕಣ್ಣಾರೆ ಕಂಡಿರುವ ಜನತೆ ಮತ್ತೆ ಅದೇ ಮಾದರಿಯ ಆಡಳಿತವನ್ನು ಬಯಸುತ್ತಿದ್ದಾರೆಯೇ ವಿನಃ ಕಣ್ಣೀರಿನ, ಭಾವನಾತ್ಮಕ ಮಾತುಗಳ, ಕೋಪದ ಭಾಷಣಗಳು-ಹೇಳಿಕೆಗಳ ನಡೆನುಡಿಯನ್ನಲ್ಲ.

ಅದರಲ್ಲೂ ವಿರೋಧಿಗಳು ಖೆಡ್ಡಾ ತೋಡಿ ಕಾದು ಕುಳಿತಿರುವ ಸಂದರ್ಭದಲ್ಲಿ ಒಂದು ಚೌಕಟ್ಟು ಮೀರಿ ಆಡುತ್ತಿರುವ ಮಾತುಗಳು ಕುಮಾರಸ್ವಾಮಿಯ ವರ್ಚಸ್ಸಿಗೆ ಅಲ್ಲದೇ ಅವರ ಆರಾಧಿಸುವ, ಪ್ರೀತಿಸುವ, ಮುಖ್ಯಮಂತ್ರಿಯ ಕುರ್ಚಿಯಲ್ಲಿ ಕುಳ್ಳಿರಿಸುವ ಕನಸೊಂದಿಗೆ ಶ್ರಮಿಸಿದ ಅದೆಷ್ಟೋ ಮಂದಿಗೆ ಇರಸು-ಮುರಸು ಉಂಟು ಮಾಡುತ್ತಿದೆ. ಆದ್ದರಿಂದ ಇಂತಹ ವರ್ತನೆಗಳು, ವಿವಾದಗಳಿಂದ ದೂರಾಗಿ, ಜನರೊಳಗೆ ಒಬ್ಬರಾಗಿ ಆಡಳಿತ ನಡೆಸುವ ತಮ್ಮ ಹಳೆ ಶೈಲಿಯ ರಾಜಕಾರಣ ಮಾಡಿದರೆ ಒಳಿತು. ಇಲ್ಲದೇ ಹೋದಲ್ಲಿ ಬಿಜೆಪಿಯ ಕುತಂತ್ರ ಮತ್ತು ಷಡ್ಯಂತ್ರಗಳಿಗೆ ಬಲಿಯಾಗಿ ಕೆಟ್ಟ ಮುಖ್ಯಮಂತ್ರಿಯೆಂಬ ಹಣೆಪಟ್ಟಿಯೊಂದಿಗೆ ಇತಿಹಾಸದ ಪುಟ ಸೇರಬೇಕಾದ ಸಂದರ್ಭ ಒದಗಿ ಬರಬಹುದು.

# ನಮ್ಮೆಲ್ಲರ ಅಹಮ್ಮೂ ಒಂದು ಬಗೆಯ ಗಾಳಿಯೇ ಅಲ್ಲವೇ ?



ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ
editoped@vishwavani.news

ಆಶ್ಚರ್ಯಕರವಾದ ಘಟನೆಯೊಂದು ಇಲ್ಲಿದೆ. ಹೆದ್ದಾರಿಯಲ್ಲಿ ಒಂದು ದೊಡ್ಡ ಲಾರಿ ಹೋಗುತ್ತಿತ್ತು. ಲಾರಿಯನ್ನು ಪೂರ್ಣಮಟ್ಟಕ್ಕೆ ತುಂಬಿಸಲಾಗಿತ್ತು. ಅದೇ ರಸ್ತೆಯಲ್ಲಿ ಹೋಗುವಾಗ ರೈಲು ಸೇತುವೆ ಅಡ್ಡ ಬಂದಿತು. ಸೇತುವೆಯ ಮೇಲುಗಡೆ ರೈಲುಗಳು, ಕೆಳಗಡೆ ವಾಹನಗಳು ಹೋಗುತ್ತಿದ್ದವು. ಸೇತುವೆಯ ಅಗಲವೂ ಕಡಿಮೆ, ಎತ್ತರವೂ ಕಡಿಮೆ. ಇದನ್ನು ಗಮನಿಸದೆ, ಚಾಲಕ ಲಾರಿಯನ್ನು ಸೇತುವೆಯ ಕೆಳಗೆ ನುಗ್ಗಿಸಿಬಿಟ್ಟರು. ಲಾರಿ ಸೇತುವೆಯಲ್ಲಿ ಸಿಕ್ಕಿಹಾಕಿಕೊಂಡಿತು. ಹಿಂದಕ್ಕೂ ಹೋಗುವ ಹಾಗಿಲ್ಲ. ಮುಂದಕ್ಕೂ ಹೋಗುವ ಹಾಗಿಲ್ಲ. ಚಾಲಕನ ಎಲ್ಲ ಪ್ರಯತ್ನಗಳು ವಿಫಲವಾದವು. ಲಾರಿಯ ಹಿಂದುಗಡೆ ಮತ್ತು ಮುಂದುಗಡೆ, ಸೇತುವೆಯ ಎರಡೂ ಕಡೆ ವಾಹನಗಳ ಸಾಲುಸಾಲು ನಿಂತವು. ಲಾರಿ ಹೊರಬರದೆ ಮತ್ತಾವ ವಾಹನವೂ ಸೇತುವೆಯ ಮೂಲಕ ಹೊರಹೋಗುವಂತಿರಲಿಲ್ಲ. ಬೇರೆ ದಾರಿಯಿರಲಿಲ್ಲ.

ಸಮಸ್ಯೆ ಸರಕಾರದವರ ಗಮನಕ್ಕೆ ಬಂತು. ಎಲ್ಲ ಇಲಾಖೆಯವರೂ ಬಂದರು. ತಲೆ ಕೆಡಿಸಿಕೊಂಡರು. ಲಾರಿಯನ್ನು ಹೊರಹಾಕುವ ವಿಧಾನಗಳ ತೀವ್ರ ಚರ್ಚೆಯಲ್ಲಿ ತೊಡಗಿದ್ದರು. ಲಾರಿಯನ್ನು ಕತ್ತರಿಸುವಂತಿಲ್ಲ, ಸೇತುವೆಯನ್ನು ಎತ್ತರಿಸುವಂತಿಲ್ಲ. ಇದನ್ನು ನೋಡಲು ಸುತ್ತಮುತ್ತಲಿನ ಜನರೆಲ್ಲ ಸೇರಿದ್ದರು. 'ಸೇತುವೆಯ ವಿನ್ಯಾಸವೇ ಸರಿಯಿಲ್ಲ', 'ಚಾಲಕ ಮೂರ್ಖತನದ ಕೆಲಸ ಮಾಡಿದ' ಎಂಬಿತ್ಯಾದಿಯಾಗಿ ಮಾತನಾಡಿಕೊಳ್ಳುತ್ತಿದ್ದರು.

ಅದೇ ಸಮಯಕ್ಕೆ ಹತ್ತಿರದ ಶಾಲೆಯೊಂದರ ಗಂಟೆ ಬಾರಿಸಲ್ಪಟ್ಟಿತು. ಶಾಲೆಯಿಂದ ಹೊರಬಂದ ಶಾಲಾ ಮಕ್ಕಳೂ ನಿಂತುಕೊಂಡರು. ಅವರಿಗೂ ಕುತೂಹಲ. ಒಬ್ಬ ಬಾಲಕ, ತಂಡದ ಮುಖ್ಯಸ್ಥರನ್ನು ಕಂಡ, ಲಾರಿಯನ್ನು ತುಂಡು ಮಾಡದೆ ಹೊರತೆಗೆಯುವ ಒಂದು ಉಪಾಯ ನನಗೆ ಹೊಳೆಯುತ್ತಿದೆ. ಅದನ್ನು ನಿಮಗೆ ಹೇಳಲೇ ಎಂದ.

ಮುಖ್ಯಸ್ಥರು ಅವನತ್ತ ತಿರಸ್ಕಾರದ ದೃಷ್ಟಿಬೀರಿ ತಲೆಹರಟೆ ಮಾಡಬೇಡ, ಹೋಗಿ ಆಟವಾಡಿಕೋ ಎಂದರು. ಬಾಲಕ ಮತ್ತೆ ನಾನು ಹೇಳುವುದನ್ನು ಕೇಳಿ! ನಿಮಗೆ ಸೂಕ್ತ ಕಂಡರೆ ಮಾಡಿ, ಇಲ್ಲದಿದ್ದರೆ ಬಿಡಿ ಎಂದ. ಅವನ ಧೈರ್ಯ ಆತ್ಮವಿಶ್ವಾಸಗಳನ್ನು ಕಂಡ ಮುಖ್ಯಸ್ಥರು 'ನಿನ್ನ ಉಪಾಯವೇನು ಬೊಗಳು' ಎಂದರು. ಬಾಲಕ ಲಾರಿಯ ಚಕ್ರಗಳು ಸುಮಾರು ಒಂದು ಅಡಿಯಷ್ಟು ಇವೆ. ಅದರಲ್ಲಿನ ಗಾಳಿಯನ್ನು ತೆಗೆದರೆ ಲಾರಿಯ ಎತ್ತರ ಕಡಿಮೆಯಾಗುತ್ತದೆ. ಲಾರಿ ಹೊರಬರುತ್ತದೆ ಎಂದ. ಬಾಲಕನ ಮಾತುಗಳನ್ನು ಕೇಳಿದ ಮುಖ್ಯಸ್ಥರು ಬೆಕ್ಕಸ ಬೆರಗಾದರು. ಇದು ನಮಗೇಕೆ ಹೊಳೆಯಲಿಲ್ಲ ಎಂದುಕೊಳ್ಳುತ್ತ ಲಾರಿಯ ಚಕ್ರಗಳ ಗಾಳಿಯನ್ನು ತೆಗೆಯಲು ಹೇಳಿದರು.

ನಿಧಾನವಾಗಿ ಲಾರಿಯ ಎತ್ತರ ಕಡಿಮೆಯಾಯಿತು. ಲಾರಿಯ ತುತ್ತತುದಿಗೂ ಸೇತುವೆಯ ಕೆಳಭಾಗಕ್ಕೂ ಏಳೆಂಟು ಅಂಗುಲ ಜಾಗ ಕಾಣಿಸಿಕೊಂಡಿತು. ಲಾರಿಯನ್ನು ಚಾಲನೆ ಮಾಡಿದಾಗ ಲಾರಿ ಸರಾಗವಾಗಿ ಹೊರಬಂದಿತು. ಸಮಸ್ಯೆ ನಿವಾರಣೆಯಾಯಿತು. ತಂಡದ ಮುಖ್ಯಸ್ಥರು ಆ ಬಾಲಕರಿಗೆಲ್ಲ ಚಾಕೊಲೆಟ್ ಕೊಟ್ಟು ಧನ್ಯವಾದ ಹೇಳಿ ಕಳುಹಿಸಿದರು.

ಬದುಕಿನಲ್ಲಿ ನಾವೂ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳುತ್ತೇವೆ. ಅದಕ್ಕೆ ಮುಖ್ಯಕಾರಣ 'ನಾನು ದೊಡ್ಡವನು' ಎಂಬ ಭಾವನೆಯ ಟೋಪಿಯನ್ನು ನಾವೇ ನಮ್ಮ ತಲೆಗೆ ಏರಿಸಿಕೊಂಡಿರುತ್ತೇವೆ. ಅಥವಾ 'ನನ್ನ ಪದತಲದಲ್ಲಿ ಜನಬಲವಿದೆ, ಧನಬಲವಿದೆ' ಎಂಬಿತ್ಯಾದಿ ಭಾವನೆಗಳ ಚಪ್ಪಲಿಗಳನ್ನು ತೊಟ್ಟಿರುತ್ತೇವೆ. ಬದುಕಿನ ಬಾಗಿಲ ಮೂಲಕ ಎತ್ತರದ ಟೊಪ್ಪಿಗೆಯನ್ನು, ದಪ್ಪದ ಚಪ್ಪಲಿಯನ್ನು ಹಾಕಿಕೊಂಡು ಒಳ-ಹೊರ ಬರಲಾಗದೆ ತಳಮಳಗೊಳ್ಳುತ್ತೇವೆ. ಟೊಪ್ಪಿಗೆಯನ್ನು ಅಥವಾ ಚಪ್ಪಲಿಯನ್ನು ತೆಗೆದು ಪಕ್ಕಕ್ಕಿಟ್ಟರೆ ಬದುಕಿನ ಬಾಗಿಲ ಮೂಲಕ ಸರಾಗವಾಗಿ ಹೋಗಬಹುದು. ಲಾರಿಯ ಚಕ್ರದ ಗಾಳಿ ತೆಗೆದಾಗ ಅದರ ಎತ್ತರ ಕಡಿಮೆಯಾಗಿ ಅದು ಸರಾಗವಾಗಿ ದಾಟಿದಂತೆ ನಾವೂ ಸಂದಿಗ್ಧ ಪರಿಸ್ಥಿತಿಗಳನ್ನು ದಾಟಬಹುದು. ಲಾರಿಯ ಚಕ್ರದ ಗಾಳಿ ತೆಗೆಯುವುದು ಸುಲಭ. ಆದರೆ ನಮ್ಮ ಟೊಪ್ಪಿಗೆಯನ್ನು, ಚಪ್ಪಲಿಯನ್ನು ತೆಗೆದು ಪಕ್ಕಕ್ಕಿರಿಸುವುದು ಅಷ್ಟು ಸುಲಭವಲ್ಲ! ನಮ್ಮ ಅಹಮ್ಮೂ ಒಂದು ರೀತಿಯಲ್ಲಿ ಬರಿಯ ಗಾಳಿಯೇ ಅಲ್ಲವೇ?